ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆಗಳ ಇಲಾಖೆ)

ಸಂಖ್ಯೆ:ವಾತೆಜಂಆ(ಆ)/ವಿಸ&ಸೇತೆಕ-01/ಬಿಎಂ/ಸಿಆರ್-04/2021-22

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ)
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-01
2ನೇ ಮಹಡಿ ಟಿ.ಟಿ.ಎಂ.ಸಿ, ಬಿ.ಎಂ.ಟಿ.ಸಿ ಕಟ್ಟಡ,
ಯಶವಂತಪುರ, ಬೆಂಗಳೂರು-560022.
Email: jcctdgsto1.bng@ka.gov.in
ದೂರವಾಣಿ ಸಂಖ್ಯೆ: 080-23570382.
ದಿನಾಂಕ: 05/08/2022.

## ಟೆಂಡರ್ ಅಧಿಸೂಚನೆ

**ವಿಷಯ:-** ದಿನಾಂಕ: 01-09-2022ರಿಂದ 31-03-2023ರ ಅವಧಿಯವರೆಗೆ ಈ ವಿಭಾಗದ ಅಧೀನ ಕಛೇರಿಗಳ ಕರ್ತವ್ಯ ನಿರ್ವಹಣೆಗಾಗಿ ಸಾಮಾನ್ಯ ಟೆಂಡರ್ ಪ್ರಕ್ರಿಯೆ ಮೂಲಕ 7 ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಬಾಡಿಗೆಗೆ ಪಡೆದುಕೊಳ್ಳುವ ಬಗ್ಗೆ.

**ಉಲ್ಲೇಖ:-**
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 96 ಶಿವಾನೀ 2012, ಬೆಂಗಳೂರು ದಿನಾಂಕ: 23-08-2012.
2. ವಾಣಿಜ್ಯ ತೆರಿಗೆಗಳ ಆಯುಕ್ತರು(ಕ), ಬೆಂಗಳೂರು ಇವರ ಪತ್ರ ಸಂಖ್ಯೆ: ವಿಹೆಚ್‌ಟಿ/ಸಿಆರ್-15/2022-23, ದಿನಾಂಕ: 01-08-2022.

* * * *

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-01, ಬೆಂಗಳೂರು ಇವರ ಕಛೇರಿಯ ಉಪಯೋಗಕ್ಕಾಗಿ 7 (ಏಳು) ಖಾಸಗಿ ವಾಹನಗಳನ್ನು ರೂ.35,000/-(ಮೂವತ್ತೈದು ಸಾವಿರ ರೂಪಾಯಿಗಳು ಮಾತ್ರ)ಗಳ ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆಯಲು ಉಲ್ಲೇಖ(2)ರ ಪತ್ರದಲ್ಲಿ ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರವರು ಅನುಮತಿಸಿರುವುದರಿಂದ ಮಾಲೀಕರೇ ಚಾಲಕರಾಗಿರುವವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಒಬ್ಬ ವಾಹನ ಮಾಲೀಕ/ಚಾಲಕರು ಒಂದು ವಾಹನ ಸೇವೆಗೆ ಮಾತ್ರ ಅರ್ಜಿ ಸಲ್ಲಿಸುವುದು. ಆದ್ದರಿಂದ ಅರ್ಹತೆಯುಳ್ಳ ವಾಹನದ ಮಾಲೀಕರೇ ಚಾಲಕರಾಗಿರುವ ವ್ಯಕ್ತಿಗಳು ಮತ್ತು ಟ್ರಾವೆಲ್ ಏಜೆನ್ಸಿಯವರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿರುತ್ತದೆ. ಈ ಕೆಳಕಂಡ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟು ವಾಹನವನ್ನು ಒದಗಿಸಲು ಮೊಹರಾದ ಲಕೋಟೆಯಲ್ಲಿ ಸಲ್ಲಿಸಬಹುದಾಗಿರುತ್ತದೆ. ಸರ್ಕಾರದ ಆದೇಶದಲ್ಲಿ ತಿಳಿಸಿರುವ ನಿಯಮಗಳನ್ವಯ 2017 ಮತ್ತು ನಂತರದ ಮಾದರಿಯ ಹಳದಿ ಬೋರ್ಡ್ ಹೊಂದಿರುವ ವಾಹನಗಳ ಸೇವೆಯನ್ನು ಮಾತ್ರ ಪಡೆಯಲಾಗುವುದು.

1) ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 22/08/2022. ಸಮಯ: 5 ಘಂಟೆಯವರೆಗೆ.
2) ಗುತ್ತಿಗೆಯ ಅವಧಿ 01/09/2022 ರಿಂದ 31/03/2023.
3) 7 ಖಾಸಗಿ ವಾಹನಗಳನ್ನು ಸರ್ಕಾರಿ ಸೇವೆಗೆ ಹೊರಗುತ್ತಿಗೆ ಆಧಾರದ ಮೇರೆಗೆ ಪಡೆಯಲಾಗುವುದು.

4) ವಾಹನದ ಪರವಾನಗಿಯ ದಿನಾಂಕ: 01/09/2022 ರಿಂದ 31/03/2023ರವರೆಗೆ ಚಾಲ್ತಿಯಲ್ಲಿ ಇರತಕ್ಕದ್ದು. ವಾಹನದ ಮಾದರಿಯು 2017 ಅಥವಾ ನಂತರದ ವರ್ಷದ ಮಾದರಿಗಳು ಅರ್ಹವಾಗಿರುತ್ತದೆ. ಉತ್ತಮ ಸ್ಥಿತಿಯ ಮತ್ತು ಇತ್ತೀಚಿನ ಮಾದರಿಯ ವಾಹನಗಳಿಗೆ ಆದ್ಯತೆ ನೀಡಲಾಗುವುದು.

5) ಈ ವಿಭಾಗದ ಮುಖ್ಯಸ್ಥರು ಕಛೇರಿಯ ಕೆಲಸ ಕಾರ್ಯಗಳಿಗೆ ಅನುಗುಣವಾಗಿ ತಕ್ಷಣಕ್ಕೆ ಲಭ್ಯವಿರುವ ವಾಹನವನ್ನು ಬಾಡಿಗೆಯ ಮೇಲೆ ತೆಗೆದುಕೊಳ್ಳುವ ಸಂದರ್ಭದಲ್ಲಿ ವಾಹನದ ಗುಣಮಟ್ಟವನ್ನು ಮತ್ತು ಚಾಲನಾ ಕೌಶಲ್ಯವನ್ನು ಪರೀಕ್ಷೆಗೆ ಒಳಪಡಿಸಲಾಗುವುದು. ಯಾವುದೇ ಕಾರಣ ನೀಡದೆ ವಾಹನವನ್ನು ಬದಲಿಸುವ, ತಕ್ಷಣವೇ ನಿರಾಕರಿಸುವ ಹಕ್ಕು ಜಂಟಿ ಆಯುಕ್ತರಿಗೆ ಇರುತ್ತದೆ.

6) ವಾಣಿಜ್ಯ ತೆರಿಗೆ ಇಲಾಖೆಯು ಅಗತ್ಯವಿರುವ ವಾಹನಗಳನ್ನು ಇ–ಸಂಗ್ರಹಣೆ ಮುಖಾಂತರ ಬಾಡಿಗೆಗೆ ಪಡೆದುಕೊಳ್ಳಲು ಈ ಮೇಲೆ ಪ್ರಸ್ತಾಪಿಸಿರುವಂತೆ ಉಂಟಾಗುವ ತಾಂತ್ರಿಕ ಅಡಚಣೆಗಳ ಕಾರಣದಿಂದ ಇ–ಸಂಗ್ರಹಣೆಗೆ ಪರ್ಯಾಯವಾಗಿ ಸಾಮಾನ್ಯ ಟೆಂಡರ್ ಪ್ರಕ್ರಿಯೆಯ ಮುಖೇನ ವಾಹನಗಳ ಸೇವೆಯನ್ನು ಪಡೆದುಕೊಳ್ಳಲು ಸಾಧ್ಯವಾಗುವಂತೆ ಕೆ.ಟಿ.ಪಿ.ಪಿ ಅಧಿನಿಯಮ 4(ಜಿ)ಗೆ ಆದೇಶ ಸಂಖ್ಯೆ:ಆಇ406 ವೆಚ್ಚ–12/2014, ದಿನಾಂಕ: 16–05–2014ರಲ್ಲಿ ಸರ್ಕಾರವು ವಿನಾಯಿತಿಯನ್ನು ನೀಡಿರುತ್ತದೆ.

7) ಈ ವಿಭಾಗದ ಮುಖ್ಯಸ್ಥರಾದ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು(ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–01, ಬೆಂಗಳೂರು ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಅಧಿನಿಯಮ 1999ರ ಅನ್ವಯ ಟೆಂಡರ್ ಕರೆಯುವ ಮತ್ತು ಅಂಗೀಕರಿಸುವ ಅಧಿಕಾರ ಹೊಂದಿರುತ್ತಾರೆ. (Tender Inviting and Other accepting Authority).

8) ಸಾಂಪ್ರದಾಯಿಕ ಟೆಂಡರ್ ಪ್ರಕ್ರಿಯೆಗೆ ಅನುಗುಣವಾಗಿ ಜನಪ್ರಿಯ ದಿನಪತ್ರಿಕೆಯೊಂದರಲ್ಲಿ, ಅಂದರೆ ವಿಜಯ ಕರ್ನಾಟಕ ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

9) ದಿನಾಂಕ: 01–10–2018 ರಿಂದ ಅನ್ವಯವಾಗುವಂತೆ ಸತತವಾಗಿ 5 ವರ್ಷಗಳ ಕಾಲ ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಸೇವೆ ಸಲ್ಲಿಸಿರುವ ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳ ಸೇವೆಯನ್ನು ತೆಗೆದುಕೊಳ್ಳುವುದಿಲ್ಲ.

10) <u>ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು/ವಿವರಗಳು.</u>

1. ಅರ್ಜಿದಾರರ ಹೆಸರು, ವಿಳಾಸ ಹಾಗೂ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು–2
2. ವಿಳಾಸದ ದಾಖಲೆ (ಮತದಾರರ ಗುರುತಿನ ಚೀಟಿ/ ರೇಷನ್‌ಕಾರ್ಡ್/ಆಧಾರ್ ಕಾರ್ಡ್/ ಪಾಸ್‌ಪೋರ್ಟ್ ಅಥವಾ ಇತರೆ ಭಾವಚಿತ್ರ ಹೊಂದಿರುವ ಗುರುತಿನ ಚೀಟಿ).
3. ವಾಹನದ ನೋಂದಣಿ ಪುಸ್ತಕದ ಪ್ರತಿ.
4. ವಾಹನದ ವಿಮಾ ಪಾಲಿಸಿಯ ಪ್ರತಿ.
5. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ವಾಹನ ಚಾಲನಾ ಪರವಾನಗಿ ಪ್ರತಿ.
6. ರೋಡ್ ಟ್ಯಾಕ್ಸ್ ಪಾವತಿಸಿರುವ ವಿವರ.
7. ಬ್ಯಾಂಕ್ ಖಾತೆಯ ವಿವರಗಳು/ಚೆಕ್‌ನ ಪ್ರತಿ.
8. ಪಾನ್ ಕಾರ್ಡ್ ಮತ್ತು ಆಧಾರ ಕಾರ್ಡ್‌ನ ಪ್ರತಿ.
9. ಮೇಲ್ಕಂಡ ವಿವರಗಳು ಹಾಗೂ ಎಲ್ಲಾ ದಾಖಲಾತಿಗಳ ಪ್ರತಿಯನ್ನು ಸೀಲು ಮಾಡಿದ ಲಕೋಟೆಯಲ್ಲಿಟ್ಟು ಲಕೋಟೆಯ ಮೇಲೆ ದಪ್ಪ ಅಕ್ಷರದಲ್ಲಿ **<u>ಖಾಸಗಿ ವಾಹನ ಮಾಲೀಕರ/– ಚಾಲಕರ ಹೊರಗುತ್ತಿಗೆ ಸೇವೆ–ಸಲ್ಲಿಸಲು ಅರ್ಜಿ</u>** ಎಂದು ನಮೂದಿಸುವುದು.
10. ಅಪೂರ್ಣ ವಿವರಗಳು ಹಾಗೂ ಮೇಲ್ಕಂಡ ದಾಖಲಾತಿಗಳನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
11. ಯಾವುದೇ ಕಾರಣವನ್ನು ನೀಡದೆ ಅರ್ಜಿಯನ್ನು ತಿರಸ್ಕರಿಸುವ ಹಕ್ಕನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–01, ಬೆಂಗಳೂರು ಇವರಿಗೆ ಕಾಯ್ದಿರಿಸಲಾಗಿದೆ.
12. ಅರ್ಜಿಗಳನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–01, ಬೆಂಗಳೂರುರವರ ಕಛೇರಿಯಲ್ಲಿ ಸಲ್ಲಿಸುವುದು.

ದರಪಟ್ಟಿ ವಿವರ ಪ್ರತಿ ತಿಂಗಳು:

**ಮೊದಲ 2,500 ಕಿ.ಮೀ ಗರಿಷ್ಠ ರೂ.35,000-00 (ಮೂವತ್ತೈದು ಸಾವಿರ ರೂಪಾಯಿಗಳು ಮಾತ್ರ)**
**ನಂತರದ ಪ್ರತಿ ಕಿ.ಮೀ ರೂ.10.00-00 (ಹತ್ತು ರೂಪಾಯಿಗಳು ಮಾತ್ರ)**
**(ವಿಶೇಷ ಸಂದರ್ಭಗಳಲ್ಲಿ ಮಾತ್ರ) 300 ಘಂಟೆಯ ನಂತರ ಪ್ರತಿ ಘಂಟೆಗೆ ರೂ.100-00**
**(ಒಂದುನೂರು ರೂಪಾಯಿಗಳು ಮಾತ್ರ)**

11) ಆಯ್ಕೆಯಾದ ವಾಹನಗಳ ಚಾಲಕರುಗಳು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತಾರೆ.

1. ಅನಾರೋಗ್ಯವು ಸೇರಿದಂತೆ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಒಂದು ತಿಂಗಳಿನಲ್ಲಿ ಎರಡು ದಿನ ಮಾತ್ರ ವಾಹನ ಉಪಯೋಗಿಸುವ ಕಛೇರಿಯ ಅಧಿಕಾರಿಯವರಿಂದ ಅನುಮತಿ ಪಡೆದು, ಮಾಲೀಕ/ಚಾಲಕರು ರಜೆ ಪಡೆಯಬಹುದು. **ಆ ಅವಧಿಯಲ್ಲಿ ಬದಲಿ ವಾಹನದ ವ್ಯವಸ್ಥೆ ಕಡ್ಡಾಯವಾಗಿ ಮಾಡಲೇಬೇಕು.** ಇಲ್ಲದಿದ್ದಲ್ಲಿ ಗೈರು ಹಾಜರಿ ದಿವಸದ ಬಾಡಿಗೆ ಕಡಿತಗೊಳಿಸಲಾಗುವುದು.
2. ಮಾಸಿಕ ಬಾಡಿಗೆ ಹೊರಗುತ್ತಿಗೆ ಆಧಾರದ ಮೇಲೆ ಹಾಗೂ ಕರಾರಿನಂತೆ ದರಗಳಿಗೆ ಒಳಪಟ್ಟು ಮಾತ್ರ ವಾಹನಗಳನ್ನು ಬಾಡಿಗೆಗೆ ಪಡೆಯಲಾಗುವುದು.
3. ಮಾಲೀಕರೇ ಚಾಲಕರಾಗಿರುವವರು ಕಟ್ಟುನಿಟ್ಟಾಗಿ ಸಮಯಪಾಲನೆ ಮಾಡತಕ್ಕದ್ದು. ವಾಹನ ಉಪಯೋಗಿಸುವ ಕಛೇರಿಯ ಅಧಿಕಾರಿಯಿಂದ ಈ ಕುರಿತು ದೂರುಗಳು ಬಂದಲ್ಲಿ ಅಂತಹ ವಾಹನದ ಬಳಕೆಯನ್ನು ನಿಲ್ಲಿಸುವ, ಒಪ್ಪಂದವನ್ನು ರದ್ದುಪಡಿಸುವ ಅಧಿಕಾರ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರವರದ್ದಾಗಿರುತ್ತದೆ.
4. ಇಲಾಖೆಯ ಈ ವಿಭಾಗದ ಪ್ರತಿ ಕಛೇರಿಯಲ್ಲಿ ಉಪಯೋಗಿಸಿರುವ ಪ್ರತಿ ವಾಹನಕ್ಕೆ ಸಂಬಂಧಿಸಿದಂತೆ ನಿಗದಿತ ಲಾಗ್ ಪುಸ್ತಕವನ್ನು ನಿರ್ವಹಿಸಿ ಪ್ರತಿ ದಿನದ ಆರಂಭ ಮತ್ತು ಅಂತ್ಯದವರೆಗಿನ ವಾಹನ ಓಡಾಟದ ಸಂಬಂಧ ಈ ಪುಸ್ತಕದಲ್ಲಿ ಅಗತ್ಯ ದಾಖಲೆಗಳನ್ನು ನಮೂದಿಸಿ ವಾಹನವನ್ನು ಉಪಯೋಗಿಸಿದ ಅಧಿಕಾರಿಯವರಿಂದ ರುಜು ಪಡೆಯತಕ್ಕದ್ದು.
5. ಈ ವಿಭಾಗದ ಪ್ರತಿ ಕಛೇರಿಯಲ್ಲಿ ಉಪಯೋಗಿಸುವ ವಾಹನ ಓಡಾಟಕ್ಕೆ ಸಂಬಂಧಿಸಿದಂತೆ ಆಯಾ ದಿನದ ಆರಂಭಿಕ ಮತ್ತು ಅಂತಿಮ ಸಮಯದ ಗಣನೆ ಮತ್ತು ಕಿ.ಮೀಟರ್‌ನ ಗಣನೆಯು ಆಯಾ ಕಛೇರಿಯ ಆವರಣದಿಂದ ಕಛೇರಿ ಕಾರ್ಯ ನಿಮಿತ್ತ ಆ ವಾಹನ ಹೊರಡುವ ಕ್ಷಣದಿಂದ ಪ್ರಾರಂಭವಾಗುತ್ತದೆ ಹಾಗೂ ಆ ದಿನದ ಕಾರ್ಯ ಮುಗಿದ ಮೇಲೆ ಅದೇ ಸ್ಥಳದಲ್ಲಿ ಕೊನೆಗೊಳ್ಳುತ್ತದೆ.
6. ಯಾವುದೇ ತಿಂಗಳಿನ ವಾಹನದ ಬಾಡಿಗೆ ಹಣವನ್ನು ಅದರ ಮುಂದಿನ ತಿಂಗಳು ವಾಹನ ಚಾಲಕರು ಸಲ್ಲಿಸುವ ಬಿಲ್ಲಿನ ಆಧಾರದ ಮೇಲೆ ಪಾವತಿಸಲಾಗುವುದು. ಇಲಾಖೆಗೆ ಬಾಡಿಗೆ ಹಣದ ಬಿಲ್ಲನ್ನು ಸಂಬಂಧಿಸಿದ ವಾಹನದ ಲಾಗ್ ಪುಸ್ತಕದ ಕಛೇರಿಯಿಂದ ದೃಢೀಕೃತವಾದ ನಕಲು ಪ್ರತಿ ಮತ್ತು ವಾಹನ ಉಪಯೋಗಿಸಿದ ಕಛೇರಿಯ ಮುಖ್ಯಸ್ಥರ ಸೂಕ್ತ ಪ್ರಮಾಣ ಪತ್ರದ ಜೊತೆ ಪ್ರತಿ ತಿಂಗಳ 5ನೇ ತಾರೀಖಿನ ಒಳಗಾಗಿ ಸಲ್ಲಿಸತಕ್ಕದ್ದು.
7. ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಈ ಇಲಾಖೆಗೆ ಒದಗಿಸುವ ಕಾಲಮಿತಿಯು ಆರಂಭದಲ್ಲಿ ದಿನಾಂಕ: 01/08/2022 ರಿಂದ 31/03/2023ರವರೆಗೆ ಚಾಲ್ತಿಯಲ್ಲಿರುತ್ತದೆ. ಅಗತ್ಯವಿದ್ದಲ್ಲಿ ಇದೇ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅಥವಾ ಒಂದು ತ್ರೈಮಾಸಿಕದ ಅವಧಿಗೆ ಆಯುಕ್ತರ ಲಿಖಿತ ಆದೇಶದ ಮೇರೆಗೆ ಮುಂದುವರೆಸಬಹುದಾಗಿರುತ್ತದೆ. ಇದಕ್ಕೂ ಮೊದಲೂ ಸಹ ಕರಾರು ರದ್ದುಗೊಳಿಸುವ ಹಕ್ಕು ಜಂಟಿ ಆಯುಕ್ತರದ್ದಾಗಿರುತ್ತದೆ. ಅಲ್ಲದೆ ಅವಧಿಗೆ ಮುನ್ನ ಸಹ ಯಾವುದೇ ನೋಟೀಸ್ ನೀಡದೆ ಮೇಲ್ಕಂಡ ಕರಾರನ್ನು ರದ್ದುಗೊಳಿಸುವ ಹಕ್ಕು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-01, ಬೆಂಗಳೂರುರವರಿಗೆ ಇರುತ್ತದೆ.
8. ವಾಹನವನ್ನು ಸರ್ಕಾರಿ ಕೆಲಸಕ್ಕೆ ಉಪಯೋಗಿಸುವಾಗ **"ಸರ್ಕಾರಿ ಕೆಲಸದ ಮೇಲೆ"** ಅಥವಾ **"ಕರ್ನಾಟಕ ಸರ್ಕಾರದ ಸೇವೆಯಲ್ಲಿ"** ಎಂಬ ಫಲಕವಿರಬೇಕು. ಪಾರ್ಕಿಂಗ್ ಶುಲ್ಕ ಇತ್ಯಾದಿ, ವಾಹನ ಮಾಲೀಕರೇ ಚಾಲಕರಾಗಿರುವವರು ಭರಿಸತಕ್ಕದ್ದು.

9. ವಾಹನದ ಯಾವುದೇ ಕಾನೂನು ಉಲ್ಲಂಘನೆಗೆ ಸ್ವತಃ ಮಾಲೀಕ/ಚಾಲಕರೇ ಜವಾಬ್ದಾರರಾಗಿರುತ್ತಾರೆ.
10. ವಾಹನವನ್ನು ಕಛೇರಿಯ ಕೆಲಸಕ್ಕೆ ಉಪಯೋಗಿಸಿದ ನಂತರ ಸಂಬಂಧಪಟ್ಟ ಅಧಿಕಾರಿಗಳಿಂದ ಕಾಲಕಾಲಕ್ಕೆ ಸರಿಯಾಗಿ ಉಪಯೋಗಿಸಿದ ವಿವರಗಳೊಂದಿಗೆ ಟ್ರಿಪ್ ಶೀಟ್‌ನಲ್ಲಿ ಭರ್ತಿ ಮಾಡಿ ಸಹಿ ಮಾಡುವುದು.
11. ಈ ಇಲಾಖೆಗೆ ಹೊರಗುತ್ತಿಗೆ ಆಧಾರದ ಮೇಲೆ ವಾಹನವನ್ನು ಪಡೆದಿರುವಂತಹ ಅವಧಿಯಲ್ಲಿ ಬೇರೆ ಯಾವುದೇ ಇಲಾಖೆಯಲ್ಲಿ ಅಥವಾ ಖಾಸಗಿ ಸಂಸ್ಥೆಯಲ್ಲಿ ಅಥವಾ ಬೇರೆ ಇನ್ಯಾವುದೇ ಕೆಲಸಗಳಿಗೆ ವಾಹನವನ್ನು ಉಪಯೋಗಿಸುವಂತಿಲ್ಲ ಹಾಗೂ ವಾಹನವನ್ನು ಪೂರ್ಣವಾಗಿ "ವಾಣಿಜ್ಯ ತೆರಿಗೆ ಇಲಾಖಾ ಸೇವೆಗಾಗಿ" ಮೀಸಲಿಡತಕ್ಕದ್ದು.
12. ವಾಹನ ಚಾಲಕರು ರಜಾ ದಿನಗಳಂದು ಕೇಂದ್ರ ಕಛೇರಿ ಬಿಡುವ ಸಂದರ್ಭದಲ್ಲಿ ಜಂಟಿ ಆಯುಕ್ತರ ಅನುಮತಿಯನ್ನು ಪಡೆಯತಕ್ಕದ್ದು ಹಾಗೂ ರಜಾ ದಿನಗಳಲ್ಲಿ ಕಾರ್ಯ ನಿರ್ವಹಿಸುವಂತಹ ಸಂದರ್ಭ ಬಂದಲ್ಲಿ ಅಂತಹ ಸಮಯದಲ್ಲಿ ಬೇಷರತ್ತಾಗಿ ಕೆಲಸ ನಿರ್ವಹಿಸತಕ್ಕದ್ದು.
13. ಮೇಲಿನ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸದಿರುವುದು ಮತ್ತು ನಿರ್ಲಕ್ಷಿಸಿರುವುದು ಕಂಡು ಬಂದಲ್ಲಿ ಯಾವುದೇ ಸೂಚನೆ ನೀಡದೇ ಹೊರ ಗುತ್ತಿಗೆ ಆಧಾರದ ಕರಾರನ್ನು ರದ್ದುಪಡಿಸಲಾಗುವುದು.
14. ವಾಹನ ಚಾಲಕರು ಒಂದು ವೇಳೆ ಕರಾರು ಒಪ್ಪಂದವನ್ನು ರದ್ದುಪಡಿಸಬೇಕಾದರೆ, ಒಂದು ತಿಂಗಳು ಮುಂಚಿತವಾಗಿ ಈ ಕಛೇರಿಗೆ ಲಿಖಿತ ಮೂಲಕ ತಿಳಿಸಬೇಕು. ತಪ್ಪಿದ್ದಲ್ಲಿ ಒಂದು ತಿಂಗಳ ವಾಹನದ ಬಾಡಿಗೆ ಮೊತ್ತವನ್ನು ನೀಡುವುದಿಲ್ಲ.

(ಎಸ್.ಉದಯಶಂಕರ್)
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–1,
ಬೆಂಗಳೂರು.

**ಪ್ರತಿಗಳನ್ನು** :

1. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು(ಕರ್ನಾಟಕ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.
2. ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿ.ಸ&ಸೇ.ತೆ.ಕ–02, 03, 04, 05 & 06 ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸದರಿ ಪ್ರಕಟಣೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ.
3. ಈ ಕಛೇರಿಯ ಸೂಚನಾ ಫಲಕಕ್ಕೆ.
4. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು (ಕೇಂದ್ರ), ಬೆಂಗಳೂರು ಇವರಿಗೆ ಮಾಹಿತಿಗಾಗಿ.
5. ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು, ಗಣಕ ಕೇಂದ್ರ, ಬೆಂಗಳೂರು ಇವರಿಗೆ ಸದರಿ ಪತ್ರವನ್ನು ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು ಕೋರಲಾಗಿದೆ.
6. ಕಛೇರಿಯ ಕಡತಕ್ಕೆ.